ಕೋಪಕ್ಕೆ ತನ್ನನ್ನು ಕೊಂದರೂ ಕೊಲ್ಲಬಹುದು ಎಂದು ಒಂದು ಕ್ಷಣ ಯೋಚಿಸಿ ಭಯವಾಯಿತು.

ಮೊದಲ ಬಾರಿಗೆ ಕಥೆಯ ಪಾತ್ರವೊಂದು ನನ್ನನ್ನೇ ಮೀರಿ ಬೆಳೆಯುತ್ತಿದೆ. ಅದನ್ನು ಹದ್ದುಬಸ್ತಿನಲ್ಲಿಡಲು ತನ್ನ ಕೈಲಾಗುತ್ತಿಲ್ಲವಲ್ಲ ಎನಿಸಿತು. ನಾರಾಯಣನ ಮುಖದಲ್ಲಿ ನೋವು, ಅನ್ಯಾಯದ ವಿರುದ್ಧದ ಪ್ರತಿಭಟನೆಯ ಕಿಚ್ಚು, ಹತಾಶೆ ಎಲ್ಲವೂ ಕಾಣುತ್ತಿತ್ತು. ಅವನ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡ ಕುಮಾರನಿಗೆ ನಾರಾಯಣನ ವರ್ತನೆ ಅತಿರೇಕವೆನಿಸಿದರೂ ಅವನಿದ್ದ ಪರಿಸ್ಥಿತಿಗೆ ಅದು ಸಮಂಜಸವೆನಿಸಿತು. 'ಇಲ್ಲಯ್ಯಾ, ಖಂಡಿತವಾಗಿ ಕಥೆಯನ್ನು ಈ ವಾರವೇ ಮುಗಿಸಿಕೊಡುತ್ತೇನೆ' ಎಂದು ದೃಢವಾದ ಧ್ವನಿಯಲ್ಲಿ ಕುಮಾರ ಹೇಳಿದ. ತಕ್ಷಣ ಕುಮಾರನ ಕಾಲರ್‌ನ್ನು ಬಿಟ್ಟ ನಾರಾಯಣ 'ಸರ್, ನಿಮಗೆ ಕೈಮುಗಿದು ಕೇಳಿಕೊಳ್ಳುತ್ತೇನೆ, ನಮ್ಮ ಸಂಸಾರ ಸರಿಮಾಡುವ ಸೂತ್ರ ನಿಮ್ಮ ಕೈಯಲ್ಲಿದೆ. ಹೇಗಾದರೂ ಮಾಡಿ ನಮ್ಮನ್ನು ಒಂದುಗೂಡಿಸಿ ಸರ್' ಎಂದು ನಾರಾಯಣನು ಕುಮಾರನ ಕಾಲಬಳಿ ಕುಸಿದ. ಅಂತೂ ಕುಮಾರನು ನಾರಾಯಣನಿಗೆ ಆಶ್ವಾಸನೆ ಕೊಟ್ಟಂತೆ ತನ್ನಲ್ಲಿರುವ ಕಥೆ ಕಟ್ಟುವ ಶಕ್ತಿ, ತಂತ್ರಗಾರಿಕೆ ಬಳಸಿಕೊಂಡು ಪಾತ್ರಗಳ ಹೆಸರು ಬದಲಾಯಿಸಿ ಒಂದೆರಡು ದಿನಗಳಲ್ಲಿಯೇ ಅಪೂರ್ಣವಾಗಿದ್ದ ಕಥೆಯನ್ನು ಪೂರ್ತಿಮಾಡಿದ. ಅದರಲ್ಲಿ ಮುಖ್ಯವಾಗಿ ದಾಂಪತ್ಯದಲ್ಲಿ ಬೇಕಾದ ನಂಬಿಕೆ, ಪ್ರೀತಿ, ನಾರಾಯಣನ ತ್ಯಾಗ ಮತ್ತು ಹೆಂಡತಿ ಮಗಳಿಗಾಗಿ ಅವನು ಪಡುತ್ತಿರುವ ಕಷ್ಟ ಇತ್ಯಾದಿಯ ಬಗ್ಗೆ ಮನೋಜ್ಞವಾಗಿ ಚಿತ್ರಿಸಿದ್ದ. ಎಲ್ಲಾ ಗಂಡ ಹೆಂಡತಿಯರಿಗೂ ಈ ಕಥೆಯಲ್ಲಿ ಸಂದೇಶವಿತ್ತು. ನಾರಾಯಣನ ಹೆಂಡತಿಗೆ ಮಾತ್ರ ಈ ಕಥೆ ತನ್ನದೇ ಅನಿಸುವಷ್ಟು ನೈಜವಾಗಿ ಮತ್ತು ಅವಳ ಮನಸ್ಸಾಕ್ಷಿಗೆ ಮುಟ್ಟುವಂತೆ ಕಥೆ ಹೆಣೆದಿದ್ದ. ಅಂತೂ ತನಗೆ ಹೋದಲ್ಲಿ ಬಂದಲ್ಲಿ ಕನಸಲ್ಲಿ ಮನಸಲ್ಲಿ ಬಂದು ಕಾಡುತ್ತಿದ್ದ ನಾರಾಯಣನ ಕಥೆಯನ್ನು ಬರೆದು ಮುಗಿಸಿದೆ ಎಂಬ ಸಂತೃಪ್ತಿಯಲ್ಲಿ, ಆತನಿಗೆ ಒಮ್ಮೆ ಕಥೆಯನ್ನು ಓದಿ ಹೇಳೋಣ ಎಂದುಕೊಂಡು ನಾರಾಯಣನನ್ನು ಹುಡುಕಿಕೊಂಡು ಅವನ ರೂಮಿನ ಹತ್ತಿರ ಬಂದ. ನಾರಾಯಣನ ರೂಮು ಲಾಕ್ ಆಗಿತ್ತು. ಪಕ್ಕದ ಮನೆಯವರು 'ನಾರಾಯಣನು ಮಗಳ ಮದುವೆಗೆ ಹೋಗಲಾಗಲಿಲ್ಲ ಎಂದು ನೆನ್ನೆ ರಾತ್ರಿ



ವಿಷ ಕುಡಿದು ಆತ್ಮಹತ್ಯೆಗೆ ಪ್ರಯತ್ನಿಸಿದ. ಆಸ್ಪತ್ರೆಗೆ ಸೇರಿಸಿದ್ದೇವೆ. ಈಗ ಅವನು ಆಸ್ಪತ್ರೆಯಲ್ಲಿ ಸಾವು ಬದುಕಿನ ನಡುವೆ ಹೋರಾಡುತ್ತಿದ್ದಾನೆ' ಎಂದು ತಿಳಿಸಿದರು. ತಕ್ಷಣ ಕುಮಾರನು ಆಸ್ಪತ್ರೆಯ ಕಡೆ ಓಡಿದ. ಈ ವಾರದಲ್ಲಿ ಮಗಳ ಮದುವೆ ಎಂದು ನಾರಾಯಣ ಹೇಳಿದ್ದು ನೆನಪಾಯಿತು. ಆಸ್ಪತ್ರೆಗೆ ಬಂದ ಕುಮಾರನನ್ನು ಐಸಿಯು ಒಳಗಡೆ ಬಿಡಲಿಲ್ಲ. ಡಾಕ್ಟರೊಬ್ಬರು ಹೊರಗೆ ಬಂದು ನಾರಾಯಣ ವೆಂಟಿಲೇಟರ್‌ನಲ್ಲಿದ್ದಾನೆಂದೂ, ಉಳಿಯುವ ಸಾಧ್ಯತೆ ಫಿಫ್ಟೀ ಫಿಫ್ಟೀ ಎಂದೂ ಹೇಳಿದರು. ಕಂಗಾಲಾದ ಕುಮಾರನು ದುಃಖದಿಂದ ಹೊರಗಡೆ ಕುರ್ಚಿಯಲ್ಲಿ ಕುಸಿದು ಕುಳಿತ. ನಾರಾಯಣನಿಗೆ ಓದಿ ಹೇಳಬೇಕೆಂದು ತಂದಿದ್ದ ಕಥೆಯನ್ನು ಬ್ಯಾಗಿನಿಂದ ಹೊರತೆಗೆದು ಕಂಬನಿ ತುಂಬಿದ ಕಣ್ಣಳಿಂದ ತಾನೇ ಬರೆದಿದ್ದ ಕಥೆಯ ಕೊನೆಯ ಪ್ಯಾರಾದ ಮೇಲೆ ಮತ್ತೊಮ್ಮೆ ಕಣ್ಣಾಡಿಸಿದ. ಕಥೆಯ ಕೊನೆಯಲ್ಲಿ ಹೆಂಡತಿಗೆ ತನ್ನ ತಪ್ಪಿನ ಅರಿವಾಗಿ, ಗಂಡನ ಹತ್ತಿರ ಕ್ಷಮೆ ಕೇಳಿ, ಎಲ್ಲರೂ ಒಂದಾಗುವಂತೆ ಕಥೆಯನ್ನು ಸುಖಾಂತ್ಯ ಮಾಡಿದ್ದನ್ನು ಮತ್ತೊಮ್ಮೆ ಓದಿದ. 'ರೀ ನಿಮ್ಮ ತ್ಯಾಗವನ್ನು ನಾನು ಅರಿಯದೆ ನಿಮ್ಮ ಮನಸ್ಸಿಗೆ ವಿರುದ್ಧವಾಗಿ ನಡೆದುಕೊಂಡೆ, ದಯವಿಟ್ಟು ನನ್ನ ತಪ್ಪನ್ನು ಕ್ಷಮಿಸಿ' ಎಂದು ಹೇಳುತ್ತಾ ಗಂಡನನ್ನು ತಬ್ಬಿಕೊಳ್ಳುವುದರೊಂದಿಗೆ ಕಥೆಯು ಅಂತ್ಯವಾಗಿತ್ತು. ಆದರೆ, ಐಸಿಯು ಒಳಗಡೆ ವೆಂಟಿಲೇಟರ್‌ನಲ್ಲಿದ್ದ ನಾರಾಯಣನು ಈಗ ತನ್ನ ಕಥೆಯ ಅಂತ್ಯದ ಬಗ್ಗೆ ಕೇಳಿಸಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ.

●